# ವಿವಿಧ ಪಾತ್ರಗಳಲ್ಲಿ ಶ್ರೀಮಾತೆ

ಪುಷ್ಪ ಶೇಷಾದ್ರಿ

***ಬದುಕಿನಲ್ಲಿ ವಹಿಸಬೇಕಾಗಿದ್ದ ವೈವಿಧ್ಯಮಯ ಪಾತ್ರಗಳಲ್ಲಿ ಮಿಂಚಿದ ಶ್ರೀಮಾತೆಯವರ ದಿವ್ಯವ್ಯಕ್ತಿತ್ವದ ಒಂದು ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಮತಿ ಪುಷ್ಪ ಶೇಷಾದ್ರಿ ಅವರು ಮೈಸೂರಿನ ರಾಮಕೃಷ್ಣ ಆಶ್ರಮದ ಭಕ್ತರು.***

**ಶ್ರೀ**ಮಾತೆಯವರು ೨೨-೧೨-೧೮೫೩ರಂದು ಜನಿಸಿದರು. ಇವರಿಗೆ ಎರಡು ಹೆಸರುಗಳಿದ್ದವು—ಶಾರದಾಸುಂದರೀ ಮತ್ತು ಠಾಕುರಮಣಿದೇವಿ ಎಂದು. ಮುಂದೆ ಇವೆರಡೂ ಸೇರಿ, ಶಾರದಾಮಣಿಯಾದರು. ಪುಟ್ಟ ವಯಸ್ಸಿನಲ್ಲಿಯೇ ಶ್ರೀಮಾತೆಯವರು ತಾಯಿಯೊಡನೆ ಗೃಹಕೃತ್ಯ ಕೆಲಸದಲ್ಲಿ ಸಹಕರಿಸುತ್ತಿದ್ದರು. ಚಿಕ್ಕ ವಯಸ್ಸಿನಿಂದಲೇ ಅವರ ಕಾರ್ಯ ತತ್ಪರತೆಯನ್ನು ಕಾಣಬಹುದಾಗಿತ್ತು.

ದೇವೀಸ್ವರೂಪಿಣಿಯಾದರೂ, ಶ್ರೀಮಾತೆಯವರು ಮಾನವಿಯಾಗಿ ಹುಟ್ಟಿ, ಮಾಡಬೇಕಾದ ಕರ್ಮಗಳನ್ನು ಚಾಚೂತಪ್ಪದೆ ಮಾಡಿದರು. ಧರ್ಮ-ಕರ್ಮಗಳನ್ನು ತಮ್ಮ ಜೀವನದಲ್ಲಿ ಒಂದೇ ರೀತಿ ಅಳವಡಿಸಿಕೊಂಡಿದ್ದರು. ಪತ್ನೀಧರ್ಮ, ಮಾತೃಧರ್ಮ, ಗುರುಧರ್ಮ ಮತ್ತು ಸ್ತ್ರೀಧರ್ಮವನ್ನು, ಅಲ್ಲದೇ ಸಮಾಜಧರ್ಮ ಹೀಗೆ ಎಲ್ಲ ರೀತಿಯ ಧರ್ಮಗಳನ್ನು ತಮ್ಮ ಬದುಕಿನಲ್ಲಿ ಸಂಗಮಗೊಳಿಸಿಕೊಂಡು ಜೀವನದಲ್ಲಿ ಮಾನವನಾಗಿ ಹುಟ್ಟಿ ಹೇಗೆ ಇವನ್ನು ಸರಿ-ಸಮಾನವಾಗಿ ಅನುಭವಿಸಬೇಕೆಂದು ನಿದರ್ಶನ ನೀಡಿರುವರು. ದೇವೀಸ್ವರೂಪಿಣಿಯಾದ ಮಾತೆಗೆ ಈ ಕಟ್ಟುಪಾಡೇನೂ ಬೇಕಿರಲಿಲ್ಲ. ಆದರೂ ಮಾನವನಾಗಿ ಅವತಾರವೆತ್ತಿದಾಗ, ಅದಕ್ಕೆ ತಕ್ಕಂತೆ ಕರ್ಮಾನುಷ್ಠಾನವನ್ನು ಮಾಡಬೇಕೆಂಬುದನ್ನು ತಿಳಿಸುತ್ತಾರೆ.

## ಪತ್ನೀಧರ್ಮ

ಶ್ರೀಮಾತೆಯವರು ಶ್ರೀರಾಮಕೃಷ್ಣರೊಡನೆ, ದಕ್ಷಿಣೇಶ್ವರದಲ್ಲಿ ಪತ್ನಿಯಾಗಿ, ಶಿಷ್ಯೆಯಾಗಿ, ನಡೆಸಿದ ಜೀವನ ಅತ್ಯಂತ ಮಹತ್ವಪೂರ್ಣವಾದದ್ದು. ಇವರ ದಾಂಪತ್ಯ ಜೀವನ ಪತಿ-ಪತ್ನಿಯರ ಕಾಮದ ವಾಸನೆ ಇಲ್ಲದ ದಿವ್ಯಸಂಬಂಧವಾಗಿತ್ತು. ಶ್ರೀಮಾತೆಯವರು ತಮ್ಮ ಪತಿಯನ್ನು ಯಾವ ದೃಷ್ಟಿಯಿಂದ ಕಾಣುತ್ತಿದ್ದರು? ಒಂದು ದಿನ ಶ್ರೀರಾಮಕೃಷ್ಣರ ಭೋಜನದ ಸಂದರ್ಭದಲ್ಲಿ ಶ್ರೀಮಾತೆಯವರು ಅವರಿಗೆ ಗಾಳಿ ಹಾಕುತ್ತ ಪಕ್ಕದಲ್ಲಿ ಕುಳಿತಿದ್ದರು. ಅಕಸ್ಮಾತ್ ಅವರ ಕೈ ನಿಶ್ಚಲವಾಯಿತು. ವಿಸ್ಮಯದಿಂದ ತಮ್ಮ ಪತಿಯ ವದನವನ್ನೇ ಈಕ್ಷಿಸತೊಡಗಿದರು. ಅನಂತರ ತಲೆಬಾಗಿ ಅವರಿಗೆ ನಮಸ್ಕರಿಸಿದರು. ಶ್ರೀರಾಮಕೃಷ್ಣರು ಆಶ್ಚರ್ಯದಿಂದ ಕೇಳಿದರು: "ಏನು, ಈಗೇಕೆ ನಮಸ್ಕಾರ?" ಎಂದು. ಶ್ರೀಮಾತೆಯವರು ಏನೂ ಉತ್ತರಿಸದೆ ತಲೆತಗ್ಗಿಸಿಕೊಂಡು ಕುಳಿತಿದ್ದರು. ಆದರೆ ಶ್ರೀರಾಮಕೃಷ್ಣರು ಬಿಡಲೇ ಇಲ್ಲ. ಅವರು ಊಟ ನಿಲ್ಲಿಸಿ "ಅದು ಸಾಧ್ಯವೇ ಇಲ್ಲ, ನೀನು ಹೇಳಲೇಬೇಕು" ಎಂದು ಬಾಲಕನಂತೆ ಹಠಹಿಡಿದರು. ಶ್ರೀಮಾತೆಯವರು ಹೇಳಲೇಬೇಕಾಯಿತು: "ನೀವು ಊಟ ಮಾಡುತ್ತಿದ್ದಿರಿ. ಹೆಗಲಿನವರೆಗೂ ನಿಮ್ಮ ದೇಹ ಹೀಗೆಯೇ ಇತ್ತು, ಆದರೆ ಅದರ ಮೇಲೆ ತಾಯಿ ಕಾಳಿಯ ತಲೆ. ತಲೆಯಮೇಲೆ ಚಿನ್ನದ ಕಿರೀಟ ಜಗಜಗಿಸುತ್ತಿತ್ತು. ನಿಮ್ಮ ಕೈಮೂಲಕ ತಾಯಿ ಕಾಳಿಯೇ ಉಣ್ಣುತ್ತಿದ್ದಳು." ಶ್ರೀರಾಮಕೃಷ್ಣರು ನಸುನಕ್ಕು "ನೀನು ಸರಿಯಾಗಿಯೇ ನೋಡಿದೆ" ಎಂದರು. ಮುಂದೆ ಶ್ರೀರಾಮಕೃಷ್ಣರು ಕಾಶೀಪುರದಲ್ಲಿ ದೇಹತ್ಯಾಗ ಮಾಡಿದಾಗ ಶ್ರೀಮಾತೆಯವರು ಕೋಣೆಯ ಒಳಗೆ ಓಡಿಬಂದು, "ತಾಯಿ, ಕಾಳಿ, ನಾನು ಏನು ತಪ್ಪು ಮಾಡಿದೆ ಎಂದು ನನ್ನನ್ನು ಬಿಟ್ಟು ಹೋದೆ?" ಎಂದು ರೋದಿಸಿದುದನ್ನು ನಾವಿಲ್ಲಿ ಗಮನಿಸಬಹುದು. ಶ್ರೀರಾಮಕೃಷ್ಣ ಮತ್ತು ಶ್ರೀಮಾತೆ ಇವರಿಬ್ಬರೂ ಪರಸ್ಪರರನ್ನು ಜಗನ್ಮಾತೆ ಎಂದು ಪರಿಗಣಿಸುತ್ತಿದ್ದುದು ಅವರಿಬ್ಬರ ಸಂಬಂಧದ ಒಂದು ಸ್ವಾರಸ್ಯಕರ ಅಂಶ.

ಶ್ರೀರಾಮಕೃಷ್ಣರ ಜೀರ್ಣಶಕ್ತಿ ಸರಿಯಿರಲಿಲ್ಲ. ಆದ್ದರಿಂದ ಶ್ರೀಮಾತೆಯವರು ಸುಲಭವಾಗಿ ಜೀರ್ಣವಾಗಬಲ್ಲ ಸೂಕ್ತೊ, ಝೋಲ್(ಒಂದು ಬಗೆಯ ಬಂಗಾಳಿ ಅಡುಗೆ) ಮುಂತಾದುವನ್ನು ಅವರಿಗಾಗಿ ತಯಾರಿಸುತ್ತಿದ್ದರು. ಎಷ್ಟು ಚೆನ್ನಾಗಿ ಪತಿಯ ಆರೈಕೆ ಮಾಡುತ್ತಿದ್ದರೆಂದರೆ ಶ್ರೀರಾಮಕೃಷ್ಣರು ಒಮ್ಮೆ ಹೇಳಿದರು, "ನೋಡು, ನಿನ್ನ ಅಡುಗೆ ಉಂಡು ನನ್ನ ದೇಹ ಎಷ್ಟು ಆರೋಗ್ಯವಾಗಿದೆ!" ಎಂದು.

**ಶ್ರೀಮಾತೆಯವರಲ್ಲಿ ಸರಳ, ಪವಿತ್ರ, ಭಕ್ತಿಮಯ ಮತ್ತು ಮುಕ್ತಿಪ್ರದ ಜೀವನದ ಸೂಕ್ಷ್ಮಸೌಂದರ್ಯ ಮತ್ತು ಅನಂತ ಅನುಗ್ರಹ ಅಭಿವ್ಯಕ್ತಗೊಂಡಿದ್ದವು. ಅವರ ಜೀವನ ಭಾರತದ ಸನಾತನ ಆತ್ಮವನ್ನು ಪ್ರತಿಬಿಂಬಿಸುವ ಕನ್ನಡಿಯಿದ್ದಂತೆ.**

***—ಆ್ಯಂಟೋನಿ ಎಲಿಂಜಿಮಿಟ್ಟಮ್***

## ಮಾತೆಯ ಧರ್ಮ

ತಾಯಿಯ ಧರ್ಮ ಮಕ್ಕಳ ಸೇವೆಯನ್ನು ಮಾಡುವುದು. ಶ್ರೀಮಾತೆಯವರು ತಮ್ಮ ಭಕ್ತಮಕ್ಕಳಿಗಾಗಿ ಏನು ಬೇಕಾದರೂ, ಎಷ್ಟೋ ಕೆಳಮಟ್ಟದ ಕೆಲಸವನ್ನಾದರೂ, ಮಾಡಲು ಸಿದ್ಧರಿದ್ದರು. ಅವರಿಗೆ ಅಡುಗೆ ಮಾಡಿ ಬಡಿಸುವುದು, ಅವರು ಉಂಡಾದ ಮೇಲೆ ಎಂಜಲೆಲೆ

ತೆಗೆದು ನೆಲ ಸಾರಿಸುವುದು, ಅವರ ಬಟ್ಟೆಯನ್ನು ತೊಳೆದು ಒಣಗಿಸುವುದು, ಅವರಿಗೆ ಮಲಗಲು ಹಾಸಿಗೆಯ ವ್ಯವಸ್ಥೆ ಮಾಡುವುದು ಇತ್ಯಾದಿ ಯಾವುದೇ ಕೆಲಸವನ್ನೂ ಅವರು ಸ್ವಲ್ಪವೂ ಹಿಂಜರಿಯದೆ ಮಾಡುತ್ತಿದ್ದರು.

ಶ್ರೀಮಾತೆಯವರು ಎಂಜಲೆಲೆ ಎತ್ತುತ್ತಿದ್ದುದನ್ನು ನೋಡಿ ನಳಿನಿ "ಅಯ್ಯಪ್ಪ! ಯಾವ್ಯಾವ ಜಾತಿಯವರದೆಲ್ಲ ಎಂಜಲೆಲೆ ಎತ್ತುತ್ತಾಳೆ!" ಎಂದು ಜುಗುಪ್ಸೆಯಿಂದ ಮೈಕೊಡವಿದ್ದಳು. ಶ್ರೀಮಾತೆಯವರು ಅದನ್ನು ಕೇಳಿ ಹೇಳಿದರು, "ಎಲ್ಲರೂ ನನ್ನವರೇ, ಯಾವ ಜಾತಿಯಾದರೇನು" ಎಂದು. ಎಂಜಲೆಲೆ ತೆಗೆದು ಪರಿಶುದ್ಧಗೊಳಿಸುವುದು ಶ್ರೀಮಾತೆಯವರ ದಿನನಿತ್ಯದ ಕಾರ್ಯವಾಗಿತ್ತು, ಬೇರೆಯವರು ಇದ್ದಾರೆಂದು ಹೇಳಿ ಭಕ್ತರಿಗೆ ಅದನ್ನು ಮಾಡಲು ಬಿಡುತ್ತಲೇ ಇರಲಿಲ್ಲ. ಅವರು ಅತ್ತ ಹೋದಮೇಲೆ ತಾವೇ ಆ ಕೆಲಸ ಮಾಡುತ್ತಿದ್ದರು. ಒಂದು ದಿನ ಜಯರಾಂಬಾಟಿಯಲ್ಲಿ ಸ್ವಾಮಿ ವಿಶ್ವೇಶ್ವರಾನಂದರು ತಾವು ಉಂಡ ತಟ್ಟೆಯನ್ನು ತೆಗೆಯುವದರಲ್ಲಿದ್ದರು, ಕೂಡಲೆ ಶ್ರೀಮಾತೆಯವರು ಅವರ ಕೈಹಿಡಿದು ನಿಲ್ಲಿಸಿ ತಾವೇ ತಟ್ಟೆಯನ್ನು ತೆಗೆದರು. "ನೀವೇಕೆ ಮಾಡುತ್ತೀರಿ? ನಾನೇ ತೆಗೆಯುತ್ತೇನೆ" ಎಂದು ಸ್ವಾಮಿಗಳು ಹೇಳಿದಾಗ ಶ್ರೀಮಾತೆಯವರಂದರು: "ನಿನಗಾಗಿ ನಾನು ಏನು ಮಹಾ ಮಾಡಿದ್ದೇನೆ? ಮಗು ತಾಯಿಯ ತೊಡೆಯಮೇಲೆ ಮಲ-ಮೂತ್ರ ವಿಸರ್ಜನೆಯನ್ನೂ ಮಾಡುತ್ತದೆ. ನೀವು ದೇವತೆಗಳಿಂದ ಆರಾಧ್ಯರು." ಶ್ರೀಮಾತೆಯವರೊಡನಿದ್ದ ಇತರ ಸ್ತ್ರೀಯರು ಈ ರೀತಿಯ ಕೆಲಸ ಮಾಡುತ್ತಲೇ ಇರಲಿಲ್ಲ. ಅಷ್ಟೇ ಅಲ್ಲದೆ ಇದರ ವಿರುದ್ಧ ಆಕ್ಷೇಪವೆತ್ತುತ್ತಿದ್ದರು: "ನೀನು ಬ್ರಾಹ್ಮಣ ಹೆಂಗಸು; ಮತ್ತೆ ಗುರು. ಇವರೆಲ್ಲ ನಿನ್ನ ಶಿಷ್ಯರು. ನೀನು ಇವರ ಎಂಜಲೆಲೆ ಎತ್ತುವುದೇಕೆ? ಇದರಿಂದ ಅವರಿಗೇ ಅಮಂಗಲ." "ನಾನು ಅವರ ತಾಯಿ. ತಾಯಿ ಮಕ್ಕಳಿಗಾಗಿ ಇದನ್ನೆಲ್ಲ ಮಾಡದೆ ಇನ್ನಾರು ಮಾಡಬೇಕು?" ಎಂದು ಅವರು ತಮ್ಮ ಸಹಜಭಾವವನ್ನು ವ್ಯಕ್ತಪಡಿಸಿದರು.

ಒಂದು ಕಡೆ ಜಗನ್ಮಾತೆಯಂತೆ ಭಕ್ತರ ಸೇವೆಯನ್ನು ಸ್ವೀಕರಿಸುತ್ತಿದ್ದರು, ಮತ್ತೊಂದು ಕಡೆ ತಾವೇ ಸೇವಕರಾಗಿ ಭಕ್ತರ ಸೇವೆ ಮಾಡುತ್ತಿದ್ದರು. "ಹೂವ ತರುವರ ಮನೆಗೆ ಹುಲ್ಲ ತರುವ" ಎಂಬ ಮಾತು ಎಷ್ಟು ಸೊಗಸಾಗಿ ಶ್ರೀಮಾತೆಯವರಿಗೆ ಒಪ್ಪುತ್ತದೆ! ಅಸಂಖ್ಯ ಭಕ್ತರಿಂದ ದೇವಿಯಂತೆ ಪೂಜಿಸಿಕೊಂಡೂ ಸಾಮಾನ್ಯ ಸ್ತ್ರೀಯಂತೆ ದಿನನಿತ್ಯದ ಗೃಹಕೃತ್ಯಗಳಲ್ಲಿ ತೊಡಗಿರುತ್ತಿದ್ದ ಶ್ರೀಮಾತೆಯವರ ಜೀವನ ಅದೆಷ್ಟು ಮನೋಜ್ಞ! ಅವರು ತಮ್ಮ ನಾದಿನಿಯರಿಗೆ ಹೇಳುತ್ತಿದ್ದರು, "ನನ್ನ ಮಕ್ಕಳಿಂದ ನನಗಾವ ತೊಂದರೆಯೂ ಇಲ್ಲ. ನೂರು ಜನ ಮಕ್ಕಳು ಬಂದರೂ ಒಬ್ಬಳೇ ಎಲ್ಲ ನಿಭಾಯಿಸುತ್ತೇನೆ." ಮಾತೃಪ್ರೇಮದಿಂದ ಹೊರಸೂಸಿದ ಈ ಹೆಮ್ಮೆಯ ಮಾತು ಅವರಿಗೆ ಮಾತ್ರ ಒಪ್ಪುತ್ತಿತ್ತು.

**ಸ್ತ್ರೀಧರ್ಮ**

ಶ್ರೀಮಾತೆಯವರು ಸ್ತ್ರೀತ್ವದ ಪ್ರತಿರೂಪವಾಗಿದ್ದರು. ಭಗವದ್ಗೀತೆಯಲ್ಲಿ ಸ್ತ್ರೀಯರ ಲಕ್ಷಣಗಳು ಯಾವುವೆಂಬುದನ್ನು ಹೇಳಲಾಗಿದೆ: ಕೀರ್ತಿ, ಶ್ರೀ, ವಾಕ್ಕು, ಸ್ಮೃತಿ, ಮೇಧಸ್ಸು, ಧೃತಿ ಮತ್ತು ಕ್ಷಮೆ (ಗೀತೆ, ೧೦.೩೪). ಲಜ್ಜಾಸೌಜನ್ಯದಿಂದ ವರ್ತಿಸುವುದೇ ಸ್ತ್ರೀಯರಿಗೆ ಕೀರ್ತಿ. ಪವಿತ್ರ ಜೀವನವೇ ಅವರಿಗೆ ಶೋಭೆ (ಶ್ರೀ)ಯನ್ನು ತರುವಂತಹದು. ಮೃದುಮಧುರ ವಾಣಿ ಉತ್ತಮ ಸ್ತ್ರೀಯ ಪ್ರಧಾನ ಲಕ್ಷಣ. ಅವರಿಗೆ ಒಳ್ಳೆಯ ಜ್ಞಾಪಕಶಕ್ತಿಯೂ ಇರಬೇಕು. ಸ್ತ್ರೀಯರಲ್ಲಿ ಜ್ಞಾಪಕಶಕ್ತಿ ಅಧಿಕವಿರುತ್ತದೆಂದು ಮನಶ್ಶಾಸ್ತ್ರಜ್ಞರೂ ಹೇಳುತ್ತಾರೆ. ಹಾಗೆಯೇ ಬುದ್ಧಿಶಕ್ತಿಯೂ (ಮೇಧಸ್ಸು) ಅವರಲ್ಲಿ ಅಧಿಕವಿರುತ್ತದೆ. ದೃಢತೆ (ಧೃತಿ) ಮತ್ತು ಕ್ಷಮಾ ಗುಣಗಳಿಂದಾಗಿ ಸ್ತ್ರೀಯರು ಹೆಚ್ಚು ಕಷ್ಟಸಹಿಷ್ಣುಗಳೂ ಕ್ರಿಯಾಶೀಲರೂ ಆಗಿರುತ್ತಾರೆ. ಈ ಎಲ್ಲ ಸ್ತ್ರೀಸಹಜ ಗುಣಗಳೂ ಶ್ರೀಮಾತೆಯವರಲ್ಲಿ ಎದ್ದು ಕಾಣುತ್ತಿದ್ದವು. ಲಜ್ಜಾಪಟಾವೃತರೆಂದೇ ಅವರನ್ನು ಸ್ತುತಿಸಲಾಗಿದೆ. ಅವರು ಪವಿತ್ರತಾಸ್ವರೂಪಿಣಿ. ಶ್ರೀರಾಮಕೃಷ್ಣರೆ ಅವರ ಪವಿತ್ರತೆಯನ್ನು ಕೊಂಡಾಡುತ್ತಾ ಹೇಳುತ್ತಾರೆ: "ಅವಳು (ಶ್ರೀಮಾತೆ) ಅಷ್ಟೊಂದು ಪರಿಶುದ್ಧಳಲ್ಲದಿದ್ದರೆ, ನನ್ನನ್ನು ಮೋಹಗೊಳಿಸಲು ಪ್ರಯತ್ನಿಸಿದ್ದಿದ್ದರೆ ನಾನೂ ಸಂಯಮವನ್ನು ಕಳೆದುಕೊಂಡು ದೇಹಬುದ್ಧಿ ಬಂದುಬಿಡುತ್ತಿತ್ತೇನೋ, ಯಾರಿಗೆ ಗೊತ್ತು? ಮದುವೆಯಾದ ಮೇಲೆ ವ್ಯಾಕುಲತೆಯಿಂದ ಜಗನ್ಮಾತೆಯನ್ನು ಪ್ರಾರ್ಥಿಸಿದ್ದೆ, 'ತಾಯಿ, ನನ್ನ ಪತ್ನಿಯ ಮನಸ್ಸಿನಿಂದ ಕಾಮಭಾವವನ್ನು ಸಂಪೂರ್ಣ ದೂರವಿರಿಸು' ಎಂದು. ಅವಳೊಡನೆ ಒಟ್ಟಿಗೆ ವಾಸಿಸುತ್ತಿದ್ದ ಸಂದರ್ಭದಲ್ಲಿ ನನಗರ್ಥವಾಯಿತು ತಾಯಿ ನನ್ನ ಪ್ರಾರ್ಥನೆಯನ್ನು ನಿಜವಾಗಿಯೂ ಆಲಿಸಿದಳೆಂದು."

> **ತೃಪ್ತಿಗಿಂತ ಅಧಿಕ ನಿಧಿಯಿಲ್ಲ, ತಾಳ್ಮೆಗಿಂತ ಅಧಿಕ ಗುಣವಿಲ್ಲ.** —*ಶ್ರೀಶಾರದಾದೇವಿ*

ಶ್ರೀಮಾತೆಯವರ ಮಾತೂ ತುಂಬ ಮೃದು. ಎಂದೂ ಅವರು ಮಾತಿನಿಂದ ಇತರರನ್ನು ನೋಯಿಸಿದವರಲ್ಲ. ಅವರು ಎಷ್ಟು ಮೆತ್ತಗೆ ಮಾತನಾಡುತ್ತಿದ್ದರೆಂದರೆ, ಕೆಲವೊಮ್ಮೆ ಅವರು ಹೇಳಿದುದನ್ನು ಅವರ ಸೇವಕರು ಗಟ್ಟಿಯಾಗಿ ಇತರರಿಗೆ ತಿಳಿಸಬೇಕಾಗುತ್ತಿತ್ತು. ಅವರ ಬುದ್ಧಿಶಕ್ತಿ, ವ್ಯಾವಹಾರಿಕ ಪ್ರಜ್ಞೆ, ಅವರ ಅದ್ಭುತ ಕ್ಷಮಾಗುಣ ಇವುಗಳಿಗೆ ಸಂಬಂಧಿಸಿದ ಹಲವಾರು ಘಟನೆಗಳು ಅವರ ಜೀವನದಲ್ಲಿ ಕಂಡುಬರುತ್ತವೆ. ಹೀಗೆ ಶ್ರೀಮಾತೆಯವರು ಸ್ತ್ರೀತ್ವದ ಪರಮಾದರ್ಶವಾಗಿ ನಮ್ಮ ಮುಂದೆ ಕಂಗೊಳಿಸುತ್ತಾರೆ.

**ಸೇವಾಧರ್ಮ**

ಶ್ರೀಮಾತೆಯವರಲ್ಲಿ ತೀವ್ರಸಾಮಾಜಿಕ ಕಳಕಳಿಯಿತ್ತು. ಅವರು ಕಾಮಾರಪುಕುರದಲ್ಲಿರುವಾಗ ತಾವೇ ಬಡತನದಿಂದ ನರಳುತ್ತಿದ್ದರೂ ಪಡಬಾರದ ಕಷ್ಟಗಳನ್ನು ಅನುಭವಿಸುತ್ತಿದ್ದರೂ ಅವರ ಪರೋಪಕಾರ ಬುದ್ಧಿ ಎಷ್ಟು ಉತ್ಕಟವಾಗಿತ್ತು ಎಂಬುದಕ್ಕೆ ಈ ಕೆಳಗಿನ ಘಟನೆ

ನಿದರ್ಶನವಾಗಿದೆ. ಕಾಮಾರಪುಕುರದಲ್ಲಿ ಆಗ ಒರಿಸ್ಸಾದಿಂದ ಬಂದ ಸಾಧುವೊಬ್ಬನು ವಾಸಿಸುತ್ತಿದ್ದ. ಆದರೆ ದುರದೃಷ್ಟವಶಾತ್ ಕೆಲವು ದುಷ್ಟಯುವಕರ ಕೋಪಕ್ಕೆ ಪಾತ್ರನಾಗಿ ಊರನ್ನು ಬಿಟ್ಟುಹೋಗುವ ಪರಿಸ್ಥಿತಿ ಒದಗಿಬಂತು. ಶ್ರೀಮಾತೆಯವರು ಅವನ ಮೇಲಿನ ಕನಿಕರ ದಿಂದ ಕೆಲವು ಗ್ರಾಮಸ್ಥರ ಸಹಾಯದಿಂದ ಅವನಿಗಾಗಿ ಒಂದು ಪ್ರತ್ಯೇಕ ಗುಡಿಸಿಲನ್ನು ಹಲದರ್‌ಪುಕುರದ ಸಮೀಪದಲ್ಲಿ ಕಟ್ಟಿಸಲು ಪ್ರಾರಂಭಿಸಿದರು. ಆಗತಾನೆ ಮಳೆಗಾಲ ಶುರುವಾಗುವುದರಲ್ಲಿತ್ತು. ಆಕಾಶದಲ್ಲಿ ದಟ್ಟ ಮೋಡ ಕವಿಯತೊಡಗಿತು. ಶ್ರೀಮಾತೆಯವರು ಅತ್ಯಂತ ವ್ಯಾಕುಲತೆಯಿಂದ ದೇವರನ್ನು ಪ್ರಾರ್ಥಿಸಿದರು, "ಭಗವಂತನೆ, ಸ್ವಲ್ಪ ಇರು, ಸ್ವಲ್ಪ ಇರು. ಈ ಗುಡಿಸಿಲೊಂದು ಮುಗಿದುಹೋಗಲಿ. ಆಮೇಲೆ ಎಷ್ಟು ಬೇಕಾದರೂ ಮಳೆ ಸುರಿಸು." ಅಂತೂ ಗುಡಿಸಿಲು ಮುಗಿಯಿತು, ಸಾಧುವಿಗೆ ಒಂದು ಆಶ್ರಯವಾಯಿತು. ಇಷ್ಟೇ ಅಲ್ಲದೆ ಶ್ರೀಮಾತೆಯವರು ತಮಗೇ ಊಟಕ್ಕೆ ತೊಂದರೆಯಾಗಿದ್ದರೂ, ಅವ ನಿಗೆ ಆಹಾರಪದಾರ್ಥಗಳನ್ನು ಒದಗಿಸುತ್ತಿದ್ದರು, ಅವನ ಯೋಗ ಕ್ಷೇಮಗಳನ್ನು ಆಗಾಗ ವಿಚಾರಿಸಿಕೊಳ್ಳುತ್ತಿದ್ದರು.

ಶ್ರೀಮಾತೆಯವರು ವಾತರೋಗದ ನೋವಿನಿಂದ ನರಳುತ್ತಿದ್ದಾಗಿನ ಘಟನೆ ಹೃದಯಸ್ಪರ್ಶಿಯಾಗಿದೆ. ಮೊದಲನೆ ಮಹಾ ಯುದ್ಧದ ಸಮಯದಲ್ಲಿ ಸಾಮಾನ್ಯ ಸ್ಪಿರಿಟ್ಟು ದುರ್ಲಭವಾಗಿತ್ತು. ಯುದ್ಧಕ್ಕೆ ಅದನ್ನು ಬಳಸುತ್ತಿದ್ದುದರಿಂದ ಅದು ಮಾರ್ಕೆಟ್ಟಿಗೆ ಬರುತ್ತಲೇ ಇರಲಿಲ್ಲ. ಆದರೆ ಒಬ್ಬ ಭಕ್ತನು ಜಯರಾಂಬಾಟಿ ಡಿಸ್ಪೆನ್ಸರಿಗಾಗಿ ಕೆಲವು ಶೀಸೆ ಸ್ಪಿರಿಟ್ಟನ್ನು ಹೇಗೋ ದಕ್ಕಿಸಿಕೊಂಡು ಬಂದಿದ್ದನು. ಶ್ರೀಮಾತೆಯವರ ವಾತರೋಗದ ನೋವಿಗೆ ಸ್ಪಿರಿಟ್ಟು ಹಾಕಿ ಉಜ್ಜಿದರೆ ನೋವು ಎಷ್ಟೋ ಕಡಮೆಯಾಗುತ್ತಿತ್ತು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. "ಆ ಸ್ಪಿರಿಟ್ಟು ಬಡವರಿಗಾಗಿ ತಂದದ್ದು. ನಾನದನ್ನು ಉಪಯೋಗಿಸಿ ಅವರಿಗೆ ಇಲ್ಲದಂತೆ ಮಾಡಲಾರೆ" ಎಂದು ನುಡಿದರು.

### ಗುರುಧರ್ಮ

ಗುರುವಿನ ಜವಾಬ್ದಾರಿ ಅತ್ಯಂತ ಹಿರಿದು. ಬರಿ ಮಂತ್ರದೀಕ್ಷೆ ನೀಡುವುದೇ ಗುರುವಿನ ಕೆಲಸವಲ್ಲ. ಶಿಷ್ಯನನ್ನು ಸರಿಯಾದ ಮಾರ್ಗ ದಲ್ಲಿ ನಡೆಸಿಕೊಂಡು ಹೋಗುವುದು, ಅವನ ಆಧ್ಯಾತ್ಮಿಕ ಉನ್ನತಿಗಾಗಿ ತಾನು ಸಾಧನೆ ಮಾಡುವುದು, ಅವಶ್ಯಕವಿದ್ದರೆ ಅವನ ಪಾಪವನ್ನೂ ಸ್ವೀಕರಿಸಿ ಅದರ ಫಲವನ್ನು ತಾನು ಅನುಭವಿಸುವುದು ಇತ್ಯಾದಿಗಳು ಶ್ರೇಷ್ಠ ಗುರುವಿನ ಕೆಲಸ. ಅವನ ಬದುಕೆ ಶಿಷ್ಯನಿಗಾಗಿ. ಶ್ರೀಮಾತೆ ಯವರಲ್ಲಿ ಇಂಥ ಆದರ್ಶ ಗುರುವನ್ನು ಕಾಣುತ್ತೇವೆ. ಅವರು ತಮ್ಮ ಇಡೀ ಜೀವನವನ್ನು ಭಕ್ತರ ಏಳಿಗೆಗಾಗಿ ಸಮರ್ಪಿಸಿದರು. ಅವರಿಗೆ ಏನೂ ಬೇಕಿರಲಿಲ್ಲ, ಅವರಿಗೇಕೀ ಬಾಳ ಬವಣೆ? ಅವರು ಯಾವ ಕಷ್ಟವನ್ನೂ ಅನುಭವಿಸಬೇಕಾಗಿರಲಿಲ್ಲ. ಅವರು ಎಂದೊ ಈ ಪ್ರಪಂಚದಿಂದ ಪಕ್ಷಿಯಂತೆ ಹಾರಿಹೋಗಬಹುದಿತ್ತು. ಆದರೂ ನಮ್ಮ ಮೇಲಿನ ಕರುಣೆಯಿಂದ ಈ ಪ್ರಪಂಚದಲ್ಲಿದ್ದು ಬಾಳ ಬೇಗುದಿಯಲ್ಲಿ ಬೆಂದು, ಭಕ್ತರ ಕಷ್ಟಕ್ಕಾಗಿ ನೊಂದು ಆದರ್ಶ ಮಡದಿಯಾಗಿ, ಆದರ್ಶ ತಾಯಿಯಾಗಿ, ಆದರ್ಶಗುರುವಾಗಿ ಬಾಳಿ ಪ್ರಪಂಚದ ಒಂದು ಅನರ್ಘ್ಯ ರತ್ನವಾಗಿ ಹೋದರು. ತಮ್ಮ ಪ್ರೇಮಗಂಗೆಯಲ್ಲಿ ಮಿಂದು ಎಲ್ಲರೂ ಪಾವನರಾಗಲೆಂದೇ ಅವರು ಬದುಕಿದರು. ಅವರು ತಮ್ಮ ಜೀವನದ ಕೊನೆಗಾಲದಲ್ಲೊಮ್ಮೆ ಹೇಳಿದರು, "ಠಾಕುರರು ಈ ಶರೀರವನ್ನು ತೆಗೆದುಕೊಂಡು ಹೋದರೂ ಯಾರ ಭಾರವನ್ನು ಹೊತ್ತಿದ್ದೇನೆಯೊ ಅವರಲ್ಲಿ ಯಾರೊಬ್ಬರು ಬಾಕಿ ಉಳಿಯುವವರೆಗೂ ನನಗೆ ವಿಶ್ರಾಂತಿಯುಂಟೆ? ನಾನು ಅವರೊಡನೇ ಇರಬೇಕು—ಅವರ ಪಾಪ-ಪುಣ್ಯದ ಭಾರವನ್ನು ನಾನು ಹೊರಬೇಕಾಗಿದೆ. ಮಂತ್ರ ಕೊಡು ವುದು ಸುಮ್ಮನೆ ಆಯಿತೆ? ಎಷ್ಟೊಂದು ಜವಾಬ್ದಾರಿ ಯನ್ನು ತಲೆಯಮೇಲೆ ಹೊರ ಬೇಕು! ಅವರಿಗಾಗಿ ಎಷ್ಟೊಂದು ಯೋಚಿಸಬೇಕು! ಠಾಕುರರು ನಾನಾ ಜನ ರನ್ನು ನಾನಾಭಾವದಲ್ಲಿ ಆಡಿಸುತ್ತಿರುವರು—ಅದಕ್ಕಾಗಿ ನಾನು ಅನುಭವಿಸಬೇಕಾಗಿದೆ. ಯಾರನ್ನು ನನ್ನವರೆಂದು ಸ್ವೀಕರಿಸಿರುವೆನೊ ಅವರನ್ನು ನಾನು ಬಿಟ್ಟು ಬಿಡಲಾರೆ."

> **ಶ್ರೀಮಾತೆಯವರೊಡನೆ ವಾಸಿಸುವ ಅಪೂರ್ವ ಭಾಗ್ಯ-ಶಾಲಿಗಳಿಗೆ ಧರ್ಮವೆಂಬುದು ಮಧುರ ಸ್ವಾಭಾವಿಕ ಆನಂದದ ವಿಷಯ. —*ಸೋದರಿ ದೇವಮಾತಾ***

ಸೋದರಿ ದೇವಮಾತಾ ನೀಡಿರುವ ಶ್ರೀಮಾತೆಯವರ ಸುಂದರ ವರ್ಣನೆಯೊಂದಿಗೆ ಈ ಲೇಖನವನ್ನು ಸಮಾಪ್ತಿ ಗೊಳಿಸುತ್ತೇನೆ : "ಶ್ರೀಮಾತೆಯವರೊಡನೆ ವಾಸಿಸುವ ಅಪೂರ್ವ ಭಾಗ್ಯಶಾಲಿಗಳಿಗೆ ಧರ್ಮವೆಂಬುದು ಮಧುರ ಸ್ವಾಭಾವಿಕ ಆನಂದದ ವಿಷಯ ; ಪವಿತ್ರತೆ ಮತ್ತು ಧಾರ್ಮಿಕತೆ ಇವು ಸ್ಪರ್ಶವೇದ್ಯ ಸತ್ಯಗಳು ; ದಿವ್ಯತೆಯ ಗಂಧ ನಿಜವಾಗಿಯೂ ಪ್ರಾಪಂಚಿಕ ದುರ್ಗಂಧವನ್ನು ನಾಶ ಮಾಡುವ ಮಧುರಸುವಾಸನೆ ಎಂಬುದು ತಿಳಿದುಬರು ವುದು. ದಯೆ, ಭಕ್ತಿ, ಭಗವನ್ಮಿಲನ—ಇವು ಅವರ ಸ್ವಭಾವವೇ ಆಗಿದ್ದವು, ಅವರು ಇವುಗಳನ್ನು ಹೊಂದಿ ದ್ದರೆಂದು ಹೇಳುವಂತಿರಲಿಲ್ಲ. ಶಾಂತಿಪ್ರದ ಆಶೀರ್ವಾಣಿ ಯಿಂದಾಗಲಿ, ಸ್ಪರ್ಶದಿಂದಾಗಲಿ ಅವುಗಳ ಇರುವಿಕೆಯನ್ನು ಅರಿಯಬಹುದಿತ್ತು.

"ಇಂಥ ಜೀವಿಗಳು ಸರೋವರ ಅಥವಾ ನದಿ ಇದ್ದಂತೆ. ಸೂರ್ಯ ಅದರ ನೀರನ್ನು ಮೇಲೆಳೆಯಬಹುದು, ಆದರೆ ಅದು ಮತ್ತೆ ಭೂಮಿಯನ್ನು ತುಂಬಿ ಹಸನುಗೊಳಿಸು ವುದು. ಹಾಗೆಯೇ ಇಂತಹ ಸಂತಪುರುಷರು ದೈಹಿಕವಾಗಿ ಮೇಲೇರಿ ನಮ್ಮಿಂದ ಕಣ್ಮರೆಯಾಗಬಹುದು, ಆದರೆ ಅವರ ಪ್ರಭಾವ ನಮ್ಮ ಮೇಲೆ ಬಿದ್ದು ನಮ್ಮ ದುರ್ಬಲ ಹೃದಯಕ್ಕೆ ನವಚೇತನವನ್ನು ನೀಡುವುದು. ಹೊಸ ಆಧ್ಯಾ ತ್ಮಿಕ ಜೀವನವನ್ನು, ಹೊಸ ಆದರ್ಶದ ಶಕ್ತಿಯನ್ನು ನೀಡು ವುದು." **(ಶ್ರೀಮಾತೆ ಶಾರದಾದೇವಿ, ಪು. ೩೭೯)**

❖